

### ಜನ ಮರುಳೋ...

'ಮೂರ್ಖರ ಪೆಟ್ಟಿಗೆ'ಯ ಮೂಲಕ ಸಿನಿಮಾ ನಟ-ನಟಿಯರು ಹಾಗೂ ಗಣ್ಯರೆನಿಸಿಕೊಂಡವರು ಹಣ ಪಡೆದೋ ಅಥವಾ ತಮ್ಮ ಹೆಸರನ್ನು ಮೆರೆಸುವ ಆತುರದಲ್ಲಿ ಜನರಿಗೆ ತಪ್ಪು ಸಂದೇಶ ರವಾನಿಸುತ್ತಿರುವುದು ವಿಷಾದಕರ. ಟಿಆರ್‌ಪಿ ಹೆಚ್ಚಿಸುವ ಭರದಲ್ಲಿ ಟಿವಿ ವಾಹಿನಿಗಳು ಅನಾರೋಗ್ಯಕರ ಸ್ಪರ್ಧೆಗಿಳಿಯುತ್ತಿರುವುದು ಅಪ್ಪಟ ಮೂರ್ಖತನ.

ಈ ಸಮೂಹ ಸನ್ನಿಯನ್ನು ನಿವಾರಿಸುವ ಯತ್ನವಾಗಿ ಸುಧಾ ಪ್ರಕಟಿಸಿರುವ ಡಾ.ಸುವರ್ಣರ ಲೇಖನ, ಮನೋವಿಜ್ಞಾನಿಗಳ ನಿಲುವು ಸೂಕ್ತ ಉತ್ತರ.

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ/ ರಘುನಾಥರಾವ್ ತಾಪ್ಸೆ, ದಾವಣಗೆರೆ/ ರಾಜಶೇಖರಗೌಡ, ಕೊಟ್ಟೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಡಿ.ಎಸ್.ಪಂಕಜ ಸುಬ್ರಮಣ್ಯಂ, ಬೆಂಗಳೂರು

### ಸಮರ್ಥನೆ ಅಲ್ಲ, ನಿರಾಕರಣೆಯೂ ಅಲ್ಲ

ಪೂರ್ವಜನ್ಮದ ನೆನಪು ನಿಜವೇ? ಲೇಖನ ಹಿಂದಿನ ಮತ್ತು ಮುಂದಿನ ಜನ್ಮಗಳ ಸಾಧ್ಯತೆಯನ್ನು ಸಮರ್ಥಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಪುನರ್ಜನ್ಮ ಕಟ್ಟುಕಥೆ ಎಂದು ಪಕ್ಕಕ್ಕೆ ತಳ್ಳುವ ಬದಲು ಆಧ್ಯಾತ್ಮಿಕ, ವೈಜ್ಞಾನಿಕ ಕ್ಷೇತ್ರಗಳ ತಜ್ಞರಿಂದ ಚರ್ಚೆ ನಡೆಸುವುದು ಸೂಕ್ತವೆನಿಸುತ್ತದೆ.

ನೇ.ಗೋ.ಭ., ಕುಕ್ಕೆ ಸುಬ್ರಮಣ್ಯ/ ದೀಪಕ್, ಕಂಬದಕೋಣೆ

### ಪದ್ಮಭೂಷಣಕ್ಕೆ ಘನತೆ

ಸಂಗೀತ, ನಾಟಕಗಳ ಮೂಲಕ ಯಾವುದೇ ಜಾತಿಯ ಅಂಧ, ಅನಾಥ, ಅಂಗವಿಕಲರ ಬಾಳಿನಲ್ಲಿ ಆತ್ಮವಿಶ್ವಾಸ ತುಂಬುವ ಈ ದೇಶದ ಮಹಾನ್ ಸಾರಂಗಿ, ಹಾರ್ಮೋನಿಯಂ ವಾದಕ, ವಿದ್ವಾಂಸ ಡಾ.ಪುಟ್ಟರಾಜ ಗವಾಯಿಗಳಿಗೆ ಪದ್ಮಭೂಷಣ ಪ್ರಶಸ್ತಿ ನೀಡಿರುವುದರಿಂದ ಆ ಪ್ರಶಸ್ತಿಗೆ ಘನತೆ ಬಂದಿದೆ. ಕಾವೆಂಶ್ರೀ ಚಿಕ್ಕ ಚೊಕ್ಕ ಚಿತ್ರ ಕಟ್ಟಿಕೊಟ್ಟಿದ್ದಾರೆ.

ಎಚ್.ಆನಂದಕುಮಾರ್, ಚಿತ್ರದುರ್ಗ/ ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ/ ನಾಗಲಾಂಬಿಕಾ, ಬೆಂಗಳೂರು

### ಸೊಗಸಾದ ಸ್ವಗತ

ಚಿಂದೋಡಿ ಲೀಲಾರ ವೈಯಕ್ತಿಕ ಬದುಕಿನ ಕುರಿತ ಗುಡಿಹಳ್ಳಿ ನಾಗರಾಜ ಅವರ 'ರಂಗನಾಯಕಿಯ ಸ್ವಗತ' ಸೊಗಸಾಗಿ ಮೂಡಿಬಂದಿದೆ. ಪದ್ಮಶ್ರೀ ವರೆಗೂ ಏರಿದ ಈ ಕಲಾವಿದೆ ಮಾಡಿದ ಸಾಧನೆ ನಿಜಕ್ಕೂ ಅನನ್ಯ. ಅವರ ಬಾಯಿಂದಲೇ ಜೀವನ ಕಥೆ ಹೇಳಿಸಿ ನಿರೂಪಿಸಿದ ಶೈಲಿ ಆಕರ್ಷಿಸಿತು.

-ಎಸ್. ಲಕ್ಷ್ಮೀನರಸಿಂಹ. ಚಾಮರಾಜನಗರ/ ರುದ್ರೇಶ್ ಅದರಂಗಿ, ಬೆಂಗಳೂರು/ ಮಲ್ಲಿಕಾರ್ಜುನ ಗಚ್ಚಿ, ಗೋಗಿ/ ಅಮೃತೇಶ ತಂಡರ, ಅಣ್ಣಿಗೇರಿ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಎಚ್.ಶಿವಕುಮಾರ, ಹಗರಿಬೊಮ್ಮನಹಳ್ಳಿ

### ಮೆಚ್ಚುಗೆಯಾದ ಕಥೆ

'ಭರತ್' ಪುಂಡಲೀಕ ಕಲ್ಲಿಗನೂರರ ಕಥೆ ತಾನೇತಾನಾಗಿ ಓದಿಸಿಕೊಂಡು ಹೋಯಿತು.

-ಬಿ.ಎಸ್. ರಮೇಶ್, ಬೆಂಗಳೂರು/ ತರಂಗಿಣಿ, ತುಮಕೂರು

### ನಕಲಿ ವೈದ್ಯರು!

ಹಲ್ಲುಬೇನೆಗೆ ನಾಟಿ ಚಿಕಿತ್ಸೆ ಕುರಿತ ಸ್ವರೂಪಾನಂದ ಎಂ. ಕೊಟ್ಟೂರು ಅವರ ಬರಹ ವಿದ್ಯಾವಂತ ಜನರೂ ಕೂಡ ಇಂತಹ ಮೌಢ್ಯಕ್ಕೆ ಹೇಗೆ ಬಲಿಯಾಗಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

ಹಲ್ಲು ಹುಳುಕಿಗೆ ಕಾರಣ ಕಣ್ಣಿಗೆ ಕಾಣುವ ಹುಳಗಳಲ್ಲ. ಹಲ್ಲು ಹುಳುಕಿಗೆ ಸೂಕ್ಷ್ಮಾಣುಗಳಾದ ಬ್ಯಾಕ್ಟೀರಿಯಾ ಕಾರಣ. ಇಂತಹ ನಕಲೀ ವೈದ್ಯರುಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಬಂದ ಈ ಬರಹವನ್ನು ಕಂಡು ಅತೀ ಖೇದವಾಯಿತು.

-ಡಾ. ಪ್ರೀತಿ ಭಟ್, ದಂತವೈದ್ಯರು, ಬೆಂಗಳೂರು

### ಎರಡು ಕಡೆ ಒಂದೇ ಕಥೆ

ಫೆ.4ರ ಸುಧಾ ಸಂಚಿಕೆಯಲ್ಲಿ ಪ್ರಕಟವಾದ 'ಅವರು ನಮ್ಮವರಲ್ಲ' ಕಥೆ ನಂತರ ಮಂಗಳೂರಿನ ಅನುಪಮಾ ಮಹಿಳಾ ಮಾಸಿಕ ಪತ್ರಿಕೆಯ ಫೆ.10ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಒಬ್ಬ ಲೇಖಕ ಒಂದೇ ಕಥೆಯನ್ನು ಎರಡು ಪತ್ರಿಕೆಗಳಿಗೆ ಕಳಿಸುವುದು ತರವಲ್ಲ.

ಎಂ.ಎಸ್.ಕಾರ್ತೀಕ್, ಬಾಳೆಹೊನ್ನೂರು/ ಇಮ್ತಿಯಾಜ್, ಮಂಗಳೂರು

ಹೊಸ ಬ್ರಾಂಚ್

ಮಲ್ಲೇಶ್ವರಂ ಮತ್ತು ಸುತ್ತ ಮುತ್ತಲಿನ ಗ್ರಾಹಕರಿಗೆ ಒಂದು ಸಿಹಿಸುದ್ದಿ

ನಮ್ಮ ಷೋರೂಂ ಮಲ್ಲೇಶ್ವರಂನಲ್ಲಿಯೂ ಸಹ ತೆರೆದಿದೆ

Please visit for Latest & Exclusive Collections

ಹೈ ಫ್ಯಾನ್ಸಿ ಸಿಂಥೆಟಿಕ್ ಮತ್ತು ಕೈಮಗ್ಗದ ವಿಶೇಷ ಸೀರೆಗಳು ಮತ್ತು ಚೂಡಿದಾರ್‌ಸೆಟ್‌ಗಳಿಗೆ ಭೇಟಿಕೊಡಿ

ಶ್ರೀ ಟೆಕ್ಸ್‌ಟೈಲ್ಸ್

ನಂ. 11, 8ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು – 560 003. ದೂ : 2356 7078

ಎಲ್ಲಾ ಬಗೆಯ ಪರಿಶುದ್ಧ ರೇಷ್ಮೆ ಸೀರೆಗಳ ಆಯ್ಕೆಗೆ ಭೇಟಿ ಕೊಡಿ

ಶ್ರೀ ಸಿಲ್ಕ್ ಅಂಡ್ ಸ್ಯಾರೀಸ್

ನಂ. 11, 8ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು – 560 003. ದೂ : 2356 7079

ಅತ್ಯುತ್ತಮ ಸೂಟಿಂಗ್ಸ್ ಮತ್ತು ಷರ್ಟಿಂಗ್ಸ್ ಬಟ್ಟೆಗಳ ಆಯ್ಕೆಗೆ ಆದರ್ಶ ಷೋ ರೂಂ
ರೇಮಂಡ್, ಓಸಿಎಂ, ಗ್ವಾಲಿಯರ್ ಡಿಗ್‌ಜಾಮ್ ಸೂಟಿಂಗ್ಸ್ ಮತ್ತು ಇತರ ಪ್ರಖ್ಯಾತ ಮಿಲ್ಲುಗಳ ಷರ್ಟಿಂಗ್ಸ್ ಬಟ್ಟೆಗಳ ಆಯ್ಕೆಗೆ

ಶ್ರೀ ಟೆಕ್ಸ್‌ಟೋರಿಯಂ

62-64, ಬಳೇಪೇಟೆ, (ಮಲಬಾರ್ ರೆಸ್ಟೋರೆಂಟ್ ಸಮೀಪ) ಬೆಂಗಳೂರು – 560 053.
ದೂರವಾಣಿ : 22872405

Gangothri

ಅತ್ಯಾಧುನಿಕ ಆಕರ್ಷಕ ಫ್ಯಾನ್ಸಿ ಸೀರೆಗಳ ಆಯ್ಕೆಗೆ

ಶ್ರೀ ಪದ್ಮ ಟೆಕ್ಸ್‌ಟೈಲ್ಸ್

ನಂ. 74, ಶ್ರೀ ಪ್ಲಾಜಾ, ಶಾಪ್ ನಂ. 1, ಎ.ಎಮ್.ಲೇನ್, ಚಿಕ್ಕಪೇಟೆ ಕ್ರಾಸ್
ಬೆಂಗಳೂರು – 560 053. ದೂ : 22342619 ಮೊ : 98865 83996
E-mail : sripadmatextiles@yahoo.in

ನ್ಯಾಯವಾದ ಮತ್ತು ನಿಖರವಾದ ಬೆಲೆಗಳಲ್ಲಿ ದೊರೆಯುತ್ತವೆ.